# ಭಿನ್ನಾಭಿಪ್ರಾಯದ ವಿಷಯಗಳಲ್ಲಿರುವ ಮಧ್ಯಮ ಮಾರ್ಗ

## [ السبيل الوسط في المسائل الخلافية ]

[**Kannada –** ಕನ್ನಡ – كنادي ]


ಅಶ್ಶೈಖ್ ಮುಹಮ್ಮದ್ ನಾಸಿರುದ್ದೀನ್ ಅಲ್‌ಅಲ್ಬಾನೀ (ﷺ)

الشيخ محمد ناصر الدين الألباني رحمه الله تعالى

ಅನುವಾದ: ಮುಹಮ್ಮದ್ ಹಂಝ ಪುತ್ತೂರು

ترجمة: محمد حمزة بتوري



IslamHouse.com

1435 – 2014

بِسْمِ اللهِ الرَّحْمَـنِ الرَّحِيم

ಅಶ್ಶೈಖ್ ಮುಹಮ್ಮದ್ ನಾಸಿರುದ್ದೀನ್ ಅಲ್‌ಅಲ್ಬಾನೀ ತಮ್ಮ 'ಸಲಾತು ತ್ತರಾವೀಹ್' ಎಂಬ ಗ್ರಂಥದಲ್ಲಿ (ಪುಟ 41–45) ಹೇಳುತ್ತಾರೆ:

"ತರಾವೀಹ್‌ನ ರಕ್‌ಅತ್‌ಗಳ ಸಂಖ್ಯೆಯ ವಿಷಯದಲ್ಲಿ ಸುನ್ನತ್ತಿನಲ್ಲಿರುವುದಕ್ಕೆ (ಅಂದರೆ ಹನ್ನೊಂದು ರಕ್‌ಅತ್ ನಿರ್ವಹಿಸುವುದಕ್ಕೆ) ಸೀಮಿತಗೊಳ್ಳಬೇಕು ಮತ್ತು ಅದಕ್ಕಿಂತ ಹೆಚ್ಚು ನಿರ್ವಹಿಸುವುದಕ್ಕೆ ಅನುಮತಿಯಿಲ್ಲವೆಂಬ ಅಭಿಪ್ರಾಯವನ್ನು ನಾವು ಹೊಂದಿರುವುದರಿಂದ, ಅದಕ್ಕಿಂತ ಹೆಚ್ಚು ನಮಾಝ್ ನಿರ್ವಹಿಸುವ ಪೂರ್ವಿಕರು ಮತ್ತು ಇತ್ತೀಚಿನವರಲ್ಲಿ ಸೇರಿದ ಉಲಮಾಗಳನ್ನು ನಾವು ಪಥಭ್ರಷ್ಟರನ್ನಾಗಿ ಅಥವಾ ನೂತನವಾದಿಗಳನ್ನಾಗಿ ಮಾಡಿದ್ದೇವೆಂದು ಯಾರೂ ಭಾವಿಸಬಾರದು. ಕೆಲವರು ಈ ರೀತಿ ಭಾವಿಸಿ ಈಗಾಗಲೇ ನಮ್ಮ ವಿರುದ್ಧ ಟೀಕೆ ಮಾಡಲು ಇದನ್ನೊಂದು ಪುರಾವೆಯನ್ನಾಗಿ ಮಾಡಿಕೊಂಡಿದ್ದಾರೆ. ಹನ್ನೊಂದು ರಕ್‌ಅತ್‌ಗಿಂತ ಹೆಚ್ಚು ನಿರ್ವಹಿಸಬಾರದು ಎಂಬ ನಮ್ಮ ಅಭಿಪ್ರಾಯವು, ಅದಕ್ಕಿಂತ ಹೆಚ್ಚು ನಿರ್ವಹಿಸಬಹುದೆಂದು ಹೇಳುವುದಕ್ಕೆ ಅನುಮತಿಯಿಲ್ಲ ಮತ್ತು ಆ ರೀತಿ ಹೇಳುವುದು ಬಿದ್‌ಅತ್ ಆಗಿದೆಯೆಂದು ಹೇಳುವುದನ್ನು ಅನಿವಾರ್ಯಗೊಳಿಸುತ್ತದೆಯೆಂದು ಅವರು ಭಾವಿಸುತ್ತಾರೆ. ಇಲ್ಲ. ಇದು ಕೇವಲ ಒಂದು ಊಹೆ ಮತ್ತು ಸುಳ್ಳು ಭಾವನೆಯಾಗಿದೆ. ಅಜ್ಞಾನದ ಪರಾಕಾಷ್ಠೆಯಾಗಿದೆ. ಯಾಕೆಂದರೆ ಒಬ್ಬ ವ್ಯಕ್ತಿಯನ್ನು ಆಕ್ಷೇಪಿಸಬೇಕಾದ ಮತ್ತು ಬಿದ್‌ಅತ್‌ಗಳ ಬಗ್ಗೆ ಎಚ್ಚರಿಕೆ ನೀಡುವ ಹದೀಸ್‌ಗಳನ್ನು ಆತನ ಮೇಲೆ ಹೊರಿಸಬೇಕಾದ ಬಿದ್‌ಅತ್ ಈ ಕೆಳಗೆ ಹೇಳಿದ ವಿಧದಲ್ಲಿರುವ ಬಿದ್‌ಅತ್ ಆಗಿದೆ:

طَرِيقَةٌ فِي الدِّينِ مُخْتَرِعَةٌ تُضَاهِي الشَّرْعِيَّةَ، يُقْصَدُ بِالسُّلُوكِ عَلَيْهَا الْمُبَالَغَةُ فِي التَّعَبُّدِ لِلَّهِ سُبْحَانَهُ.

**"ಶರೀಅತ್ತಿನಲ್ಲಿರುವ ಮಾರ್ಗಕ್ಕೆ ಹೋಲಿಕೆಯಾಗುವ ವಿಧದಲ್ಲಿ, ಧರ್ಮದಲ್ಲಿ ಹೊಸದಾಗಿ ಸೃಷ್ಟಿಸಲಾದ ಮಾರ್ಗ. ಇದನ್ನು ಪ್ರವೇಶಿಸುವ ಮೂಲಕ ಅಲ್ಲಾಹನಿಗೆ ಇಬಾದತ್ ಮಾಡುವುದರಲ್ಲಿ ಪರಾಕಾಷ್ಠೆಯನ್ನು ಉದ್ದೇಶಿಸಲಾಗುತ್ತದೆ."** [ಅಲ್‌ಇಬ್ದಾಅ್ ಫೀ ಮದಾರ್‍ರಿಲ್ ಇಬ್ತಿದಾಅ್ ಪುಟ 15]

ಆದ್ದರಿಂದ ಶರೀಅತ್ತಿನಲ್ಲಿಲ್ಲವೆಂದು ಅರಿತಿದ್ದೂ ಸಹ, ಇಬಾದತ್ ಮಾಡುವುದರಲ್ಲಿ ಪರಾಕಾಷ್ಠೆಯನ್ನು ಉದ್ದೇಶಿಸುತ್ತಾ, ಯಾರಾದರೂ ಒಂದು ವಿಷಯವನ್ನು ಹೊಸದಾಗಿ

ನಿರ್ಮಿಸಿದರೆ ಅದು ಬಿದ್‌ಅತ್ ಆಗಿದೆ. ಅಂತಹವನ ಮೇಲೆ ಬಿದ್‌ಅತ್‌ಗಳ ಬಗ್ಗೆ ಎಚ್ಚರಿಕೆ ನೀಡುವ ಹದೀಸ್‌ಗಳನ್ನು ಹೊರಿಸಲಾಗುತ್ತದೆ. ಆದರೆ ಯಾರಾದರೂ ಅರಿವಿಲ್ಲದೆ ಮತ್ತು ಇಬಾದತ್ ಮಾಡುವುದರಲ್ಲಿ ಪರಾಕಾಷ್ಠೆಯನ್ನು ಉದ್ದೇಶಿಸದೆ ಒಂದು ಬಿದ್‌ಅತ್ ಮಾಡಿಬಿಟ್ಟರೆ ಹದೀಸ್‌ಗಳಲ್ಲಿರುವ ಎಚ್ಚರಿಕೆಯು ಅವನಿಗೆ ಯಾವುದೇ ಸಂದರ್ಭದಲ್ಲೂ ಅನ್ವಯವಾಗುವುದಿಲ್ಲ. ಸ್ವಲ್ಪವೂ ಅನ್ವಯವಾಗುವುದಿಲ್ಲ. ಅದು ಅನ್ವಯವಾಗುವುದು ಸುನ್ನತ್ತನ್ನು ಪ್ರಚಾರ ಮಾಡುವ ಮಾರ್ಗದಲ್ಲಿ ನಿಂತು ಯಾವುದೇ ಅರಿವೋ, ಮಾರ್ಗದರ್ಶನವೋ, ಬೆಳಕನ್ನು ನೀಡುವ ಗ್ರಂಥವೋ ಇಲ್ಲದೆ ಎಲ್ಲ ಬಿದ್‌ಅತ್‌ಗಳನ್ನೂ ಉತ್ತಮವೆಂದು ಹೇಳುತ್ತಾ ಸಾಗುವ ನೂತನವಾದಿ ಗಳಿಗಾಗಿದೆ. ಅವರು ಇದನ್ನು ಮಾಡುತ್ತಿರುವುದು ಉಲಮಾಗಳನ್ನು ತಕ್ಲೀದ್ ಮಾಡಿಯಲ್ಲ, ಬದಲಾಗಿ ಅವರು ಇದನ್ನು ಮಾಡುತ್ತಿರುವುದು ತಮ್ಮ ಸ್ವೇಚ್ಛೆಯನ್ನು ಅನುಸರಿಸಿಕೊಂಡಾಗಿದೆ ಮತ್ತು ಜನಸಾಮಾನ್ಯರನ್ನು ತೃಪ್ತಿಪಡಿಸುವುದಕ್ಕಾಗಿದೆ. ಆದರೆ ಇಂತಹ ಜನರಲ್ಲಿ ತಮ್ಮ ಇಲ್ಮ್‌ನಿಂದಾಗಿ, ಸತ್ಯಸಂಧತೆಯಿಂದಾಗಿ, ಸಜ್ಜನತೆಯಿಂದಾಗಿ ಮತ್ತು ನಿಷ್ಕಳಂಕತೆಯಿಂದಾಗಿ ಸುಪರಿಚಿತರಾಗಿರುವ ಯಾವೊಬ್ಬ ವಿದ್ವಾಂಸರೂ ಒಳಪಡುವುದಿಲ್ಲ. ವಿಶೇಷವಾಗಿ ಮುಜ್ತಹಿದ್‌ಗಳಾದ ಮದ್‌ಹಬ್‌ಗಳ ನಾಲ್ಕು ಇಮಾಮ್‌ಗಳು ಖಂಡಿತ ಒಳಪಡುವುದಿಲ್ಲ. ಅಲ್ಲಾಹು ಅವರೆಲ್ಲರ ಬಗ್ಗೆ ತೃಪ್ತನಾಗಲಿ.

ಇಬಾದತ್ ಮಾಡುವುದರಲ್ಲಿ ಪರಾಕಾಷ್ಠೆಯನ್ನು ಉದ್ದೇಶಿಸಿ ಬಿದ್‌ಅತ್ ಆಗಿರುವ ಒಂದು ವಿಷಯವನ್ನು ಅವರು (ಇಮಾಮ್‌ಗಳು) ಖಂಡಿತವಾಗಿಯೂ ಉತ್ತಮವೆಂದು ಹೇಳಲಾರರೆಂದು ನಾವು ಖಂಡಿತವಾಗಿ ಹೇಳುತ್ತೇವೆ. ಅವರು ಹಾಗೆ ಹೇಳುವುದಾದರೂ ಹೇಗೆ? ಅವರಂತೂ ಅದನ್ನು ವಿರೋಧಿಸಿದವರಾಗಿದ್ದರು. ಇದರ ಬಗ್ಗೆ ಹೆಚ್ಚಿನ ವಿವರಣೆಯನ್ನು 'ಅಲ್‌ಬಿದ್‌ಅತ್' ಎಂಬ ವಿಶೇಷ ಗ್ರಂಥದಲ್ಲಿ ನಾವು ವಿವರಿಸುವೆವು. ಇನ್ ಶಾ ಅಲ್ಲಾಹ್.

ಹೌದು, ಶರೀಅತ್‌ನ ಪ್ರಕಾರ ಪ್ರಮಾದವಾಗಿರುವ ಒಂದು ವಿಷಯವನ್ನು ಅವರು ಮಾಡಬಹುದು. ಆದರೆ ಅದಕ್ಕಾಗಿ ಅವರನ್ನು ಶಿಕ್ಷಿಸಲಾಗದು. ಬದಲಾಗಿ ನಾವು ಈಗಾಗಲೇ ಹಲವು ಬಾರಿ ಪುನರುಚ್ಚರಿಸಿದಂತೆ ಅವರು ಕ್ಷಮೆಗೆ ಅರ್ಹರಾಗಿರುವರು ಮತ್ತು ಪ್ರತಿಫಲಕ್ಕೂ ಅರ್ಹರಾಗಿರುವರು. ಪರಿಶೋಧನೆ ಮಾಡುವವನಿಗೆ ಈ ಪ್ರಮಾದವು ಬಿದ್‌ಅತ್‌ನಲ್ಲಿ ಒಳಪಟ್ಟ ಒಂದು ವಿಧವಾಗಿದೆಯೆಂದು ಸ್ಪಷ್ಟವಾದರೂ ಸಹ ಅವರಿಗೆ ಅದರಲ್ಲಿ ಕ್ಷಮೆಯಿದೆಯೆಂಬ ನಿಯಮವು ಬದಲಾಗುವುದಿಲ್ಲ. ಯಾಕೆಂದರೆ ಅವರು ಆ ಪ್ರಮಾದವನ್ನು ಮಾಡಿದ್ದು ಅವರ ಇಜ್ತಿಹಾದ್‌ನ ಕಾರಣದಿಂದಾಗಿದೆ. ಒಬ್ಬ ವಿದ್ವಾಂಸರು ಸುನ್ನತ್ ಎಂದು ಭಾವಿಸಿ ಬಿದ್‌ಅತ್ ಆಗಿರುವ ಕಾರ್ಯವನ್ನು ಮಾಡಿದರೆ ಮತ್ತು ಹಲಾಲ್ ಎಂದು ಭಾವಿಸಿ ಹರಾಮ್ ಆಗಿರುವ ಕಾರ್ಯವನ್ನು ಮಾಡಿದರೆ ಅವೆರಡರ ಮಧ್ಯೆ ಅದೊಂದು ಪ್ರಮಾದವಾಗಿದೆಯೆಂಬ ವಿಷಯದಲ್ಲಿ ಯಾವುದೇ ವ್ಯತ್ಯಾಸವಿಲ್ಲವೆಂದು

ವಿದ್ವಾಂಸನಾಗಿರುವ ಒಬ್ಬ ವ್ಯಕ್ತಿ ಸಂಶಯಪಡಲಾರನು. ಈಗಾಗಲೇ ಹೇಳಿದಂತೆ ಅದಕ್ಕಾಗಿ ಅವರಿಗೆ ಕ್ಷಮೆಯಿದೆ.

ಈ ಕಾರಣದಿಂದಲೇ, ಉಲಮಾಗಳು ತಮ್ಮ ಮಧ್ಯೆ ಕೆಲವು ವಿಷಯಗಳಲ್ಲಿ ತೀವ್ರ ಭಿನ್ನಾಭಿಪ್ರಾಯಗಳಿದ್ದೂ ಸಹ ಅವರು ಪರಸ್ಪರರನ್ನು ಪಥಭ್ರಷ್ಟರೆಂದು ಕರೆಯುತ್ತಿರಲಿಲ್ಲ. ನೂತನವಾದಿಗಳೆಂದೂ ಕರೆಯುತ್ತಿರಲಿಲ್ಲ. ಈ ವಿಷಯದಲ್ಲಿ ನಾನೊಂದು ಉದಾಹರಣೆ ನೀಡುತ್ತೇನೆ:

ಯಾತ್ರೆಯ ಸಂದರ್ಭದಲ್ಲಿ ಕಡ್ಡಾಯ ನಮಾಝ್‌ಗಳನ್ನು ಪೂರ್ಣವಾಗಿ (ಅಂದರೆ ಕಸ್ರ್ ಮಾಡದೆ) ನಿರ್ವಹಿಸುವ ವಿಷಯದಲ್ಲಿ ಸಹಾಬಾಗಳ ಕಾಲದಿಂದಲೇ ಭಿನ್ನಾಭಿಪ್ರಾಯವಿದೆ. ಸಹಾಬಾಗಳ ಪೈಕಿ ಕೆಲವರು ಅದಕ್ಕೆ ಅನುಮತಿಯಿದೆ ಎನ್ನುತ್ತಾರೆ. ಇತರ ಕೆಲವರು ಅದನ್ನು ವಿರೋಧಿಸುತ್ತಾರೆ. ಇವರ ಅಭಿಪ್ರಾಯ ಪ್ರಕಾರ ಯಾತ್ರೆಯ ಸಂದರ್ಭದಲ್ಲಿ ಕಡ್ಡಾಯ ನಮಾಝ್‌ಗಳನ್ನು ಪೂರ್ಣವಾಗಿ (ಅಂದರೆ ಕಸ್ರ್ ಮಾಡದೆ) ನಿರ್ವಹಿಸುವುದು ಸುನ್ನತ್ತಿಗೆ ವಿರುದ್ಧವಾಗಿರುವ ಬಿದ್‌ಅತ್ ಆಗಿದೆ. ವಸ್ತುಸ್ಥಿತಿ ಹೀಗಿದ್ದೂ ಸಹ ಅವರು ತಮಗೆ ವಿರುದ್ಧವಾಗಿ ಅಭಿಪ್ರಾಯ ಹೊಂದಿದವರನ್ನು ನೂತನವಾದಿಗಳೆಂದು ಕರೆಯುತ್ತಿರಲಿಲ್ಲ. ಇಬ್ನ್ ಉಮರ್(ﷺ)ರವರನ್ನೇ ನೋಡಿ! ಅವರು ಹೇಳುತ್ತಿದ್ದರು:

صَلَاةُ الْمُسَافِرِ رَكْعَتَانِ، مَنْ خَالَفَ السُّنَّةَ كَفَرَ.

**"ಯಾತ್ರೆ ಮಾಡುವವನ ನಮಾಝ್ ಎರಡು ರಕ್‌ಅತ್ ಆಗಿದೆ. ಯಾರಾದರೂ ಇದಕ್ಕೆ ವಿರುದ್ಧವಾಗಿ ಸಾಗಿದರೆ ಅವನು ಕಾಫಿರ್ ಆಗಿದ್ದಾನೆ."** [ಇದನ್ನು ಅಸ್ಸಿರಾಜ್ ತಮ್ಮ 'ಮುಸ್ನದ್'ನಲ್ಲಿ (21/122–123) ಎರಡು ಸಹೀಹಾದ ಸನದ್‌ಗಳೊಂದಿಗೆ ವರದಿ ಮಾಡಿದ್ದಾರೆ].

ಹೀಗಿದ್ದೂ ಸಹ ತಮ್ಮ ಇಜ್ತಿಹಾದ್‌ನ ಮೂಲಕ ಇದಕ್ಕೆ ವಿರುದ್ಧವಾಗಿ ಅಭಿಪ್ರಾಯಪಟ್ಟ ಯಾರನ್ನೂ ಕೂಡ ಅವರು ಕಾಫಿರ್ ಎಂದೋ, ಪಥಭ್ರಷ್ಟ ಎಂದೋ ಕರೆಯಲಿಲ್ಲ. ಬದಲಾಗಿ ಪೂರ್ಣವಾಗಿ ನಿರ್ವಹಿಸಬೇಕೆಂಬ ಅಭಿಪ್ರಾಯವನ್ನು ಹೊಂದಿರುವ ವ್ಯಕ್ತಿಯ ಹಿಂದೆ ನಮಾಝ್ ಮಾಡುವಾಗ ಇಬ್ನ್ ಉಮರ್(ﷺ)ರವರು ಕೂಡ ಪೂರ್ಣವಾಗಿ ನಮಾಝ್ ನಿರ್ವಹಿಸುತ್ತಿದ್ದರು.

ಅಸ್ಸಿರಾಜ್ ಸಹೀಹಾದ ಸನದ್‌ನೊಂದಿಗೆ ವರದಿ ಮಾಡಿದ ಹದೀಸಿನಲ್ಲಿರುವಂತೆ ಪ್ರವಾದಿ(ﷺ)ರವರು ಮಿನಾದಲ್ಲಿ (ನಾಲ್ಕು ರಕ್‌ಅತ್ತಿನ ನಮಾಝ್‌ಗಳನ್ನು) ಎರಡು ರಕ್‌ಅತ್‌ಗಳಾಗಿ ನಿರ್ವಹಿಸಿದ್ದರು. ಹಾಗೆಯೇ ಅಬೂಬಕ್ರ್(ﷺ) ಮತ್ತು ಉಮರ್(ﷺ)ರವರೂ ಕೂಡ ಎರಡು ರಕ್‌ಅತ್‌ಗಳಾಗಿ ನಿರ್ವಹಿಸಿದ್ದರು.

ಉಸ್ಮಾನ್(ﷺ)ರವರು ತಮ್ಮ ಆಡಳಿತದ ಆರಂಭ ಕಾಲದಲ್ಲಿ ಹೀಗೆಯೇ ಎರಡು ರಕ್‌ಅತ್‌ಗಳಾಗಿ ನಿರ್ವಹಿಸಿದ್ದರು. ನಂತರ ಉಸ್ಮಾನ್(ﷺ)ರವರು ಮಿನಾದಲ್ಲಿ ನಮಾಝ್ ಮಾಡಿದಾಗ ನಾಲ್ಕು ರಕ್‌ಅತ್ ನಿರ್ವಹಿಸಿದರು. ಆಗ ಇಬ್ನ್ ಉಮರ್(ﷺ)ರವರು ಕೂಡ ಅವರ ಹಿಂದೆ ನಾಲ್ಕು ರಕ್‌ಅತ್ ನಮಾಝ್ ನಿರ್ವಹಿಸಿದರು. ಆದರೆ ಅವರು (ಇಬ್ನ್ ಉಮರ್) ಒಂಟಿಯಾಗಿ ನಮಾಝ್ ಮಾಡುವಾಗ ಎರಡು ರಕ್‌ಅತ್ ನಿರ್ವಹಿಸುತ್ತಿದ್ದರು. [ಅಲ್‌ಬುಖಾರೀ ಕೂಡ ಇದೇ ರೀತಿ ಇಬ್ನ್ ಮಸ್‌ಊದ್(ﷺ)ರಿಂದ ವರದಿ ಮಾಡಿದ್ದಾರೆ (2/451/452). ಈ ವರದಿಯಲ್ಲಿರುವ ಪ್ರಕಾರ ಉಸ್ಮಾನ್(ﷺ)ರವರು ನಾಲ್ಕು ರಕ್‌ಅತ್ ನಿರ್ವಹಿಸಿದ ಸುದ್ದಿ ಇಬ್ನ್ ಮಸ್‌ಊದ್‌ರಿಗೆ ತಲುಪಿದಾಗ ಅವರು 'ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್' ಎಂದರು].

ಆಲೋಚಿಸಿ ನೋಡಿರಿ; ಯಾತ್ರೆಯಲ್ಲಿ ಪೂರ್ಣವಾಗಿ ನಮಾಝ್ ಮಾಡುವ ಮೂಲಕ ದೃಢಪಟ್ಟ ಸುನ್ನತ್ತಿಗೆ ವಿರುದ್ಧವಾಗಿ ಸಾಗಿದ ವ್ಯಕ್ತಿ ಮಾಡಿದ ಪ್ರಮಾದದ ಕಾರಣದಿಂದಾಗಿ, ಆ ವ್ಯಕ್ತಿಯನ್ನು ಪಥಭ್ರಷ್ಟ ಅಥವಾ ನೂತನವಾದಿಯೆಂದು ಕರೆಯಲು ಇಬ್ನ್ ಉಮರ್(ﷺ)ರವರ ವಿಶ್ವಾಸವು ಅವರನ್ನು ಪ್ರೇರೇಪಿಸಲಿಲ್ಲ. ಬದಲಾಗಿ ಅವರು ಆ ವ್ಯಕ್ತಿಯ ಹಿಂದೆ ನಮಾಝ್ ಮಾಡಿದರು. ಯಾಕೆಂದರೆ ಉಸ್ಮಾನ್(ﷺ)ರವರು ನಾಲ್ಕು ರಕ್‌ಅತ್ ನಿರ್ವಹಿಸಿದ್ದು ಅವರು ಸ್ವೇಚ್ಛೆಯನ್ನು ಅನುಸರಿಸಿ (ಅಲ್ಲಾಹು ಕಾಪಾಡಲಿ) ಮಾಡಿದ್ದಾಗಿರಲಿಲ್ಲವೆಂದು ಇಬ್ನ್ ಉಮರ್(ﷺ)ರಿಗೆ ಗೊತ್ತಿತ್ತು. ಬದಲಾಗಿ ಅವರು ಇದನ್ನು ಮಾಡಿದ್ದು ಅವರ ಇಜ್ತಿಹಾದ್‌ನ ಕಾರಣದಿಂದಾಗಿತ್ತು.

[ಅಬೂ ದಾವೂದ್‌ರವರು ಅಝ್ಝುಹ್ರೀರಿಂದ ವರದಿ ಮಾಡಿದ ಪ್ರಕಾರ (1/308) ಉಸ್ಮಾನ್(ﷺ)ರವರು ಮಿನಾದಲ್ಲಿ ನಾಲ್ಕು ರಕ್‌ಅತ್ ನಿರ್ವಹಿಸಿದ್ದು ಆ ವರ್ಷ ಗ್ರಾಮೀಣ ಅರಬಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹಜ್‌ನಲ್ಲಿ ಪಾಲ್ಗೊಂಡಿದ್ದರು ಎಂಬ ಕಾರಣದಿಂದಾಗಿತ್ತು. ಆ ನಮಾಝ್ ಎರಡು ರಕ್‌ಅತ್ ಅಲ್ಲ ಬದಲಾಗಿ ನಾಲ್ಕು ರಕ್‌ಅತ್ ಆಗಿದೆಯೆಂದು ಅವರಿಗೆ ಕಲಿಸಿಕೊಡುವುದಕ್ಕಾಗಿ ಉಸ್ಮಾನ್(ﷺ)ರವರು ನಾಲ್ಕು ರಕ್‌ಅತ್ ನಿರ್ವಹಿಸಿದ್ದರು.]

ತಮ್ಮ ಮಧ್ಯೆಯಿರುವ ಭಿನ್ನಾಭಿಪ್ರಾಯಗಳನ್ನು ಪರಿಹರಿಸಲು ಮುಸ್ಲಿಮರು ಕಡ್ಡಾಯವಾಗಿ ಈ 'ಮಧ್ಯಮ ಮಾರ್ಗ'ವನ್ನು ತಮ್ಮ ಮಾರ್ಗವನ್ನಾಗಿ ಮಾಡಿಕೊಳ್ಳಬೇಕೆಂಬುದು ನಮ್ಮ ಅಭಿಪ್ರಾಯವಾಗಿದೆ. ಕುರ್‌ಆನ್ ಮತ್ತು ಸುನ್ನತ್ತಿನ ಪ್ರಕಾರ ತಮಗೆ ಸರಿಯೆಂದು ಕಾಣುವ ಅಭಿಪ್ರಾಯವನ್ನು ಪ್ರತಿಯೊಬ್ಬರೂ

ಬಹಿರಂಗವಾಗಿ ಹೇಳಬೇಕು. ಆದರೆ ಯಾರಾದರೂ ತಮಗೆ ಗೋಚರವಾಗುವ ಯಾವುದಾದರೂ ಸಂಶಯದಿಂದಾಗಿ ಆ ಅಭಿಪ್ರಾಯವನ್ನು ಸ್ವೀಕರಿಸದಿದ್ದರೆ ಅವರನ್ನು ಪಥಭ್ರಷ್ಟರೆಂದೋ ನೂತನವಾದಿಯೆಂದೋ ಕರೆಯಬಾರದು ಎಂಬ ಶರತ್ತು ಇದಕ್ಕಿದೆ. ಯಾಕೆಂದರೆ ಮುಸ್ಲಿಮರು ಒಗ್ಗಟ್ಟಾಗಲು, ಅವರ ನುಡಿಯು ಒಂದೇ ಆಗಲು, ಸತ್ಯವು ಸ್ಪಷ್ಟವಾಗಿ ಮತ್ತು ಪ್ರಕಾಶಮಾನವಾಗಿ ಉಳಿಯಲು ಇರುವ ಏಕೈಕ ಮಾರ್ಗವು ಇದು ಮಾತ್ರವಾಗಿದೆ. ಈ ಕಾರಣದಿಂದಲೇ, ಬೇರೆ ಬೇರೆ ಇಮಾಮ್‌ಗಳ ಹಿಂದೆ ನಮಾಝ್ ಮಾಡುತ್ತಾ, ಈತ ಹನಫೀ ಈತ ಶಾಫಿಈ ಎಂದು ಹೇಳುತ್ತಾ ಮುಸ್ಲಿಮರು ಪರಸ್ಪರ ಭಿನ್ನರಾಗುವುದು, ಏಕೈಕ ಇಮಾಮರ ಹಿಂದೆ ನಮಾಝ್ ಮಾಡುತ್ತಿದ್ದ ಮತ್ತು ಅನೇಕ ಇಮಾಮ್‌ಗಳ ಹಿಂದೆ ನಮಾಝ್ ಮಾಡದಿರುತ್ತಿದ್ದ ಸಲಫ್‌ಗಳ ಮಾರ್ಗಕ್ಕೆ ವಿರುದ್ಧವಾಗಿರುವುದಾಗಿ ನಾವು ಕಾಣುತ್ತೇವೆ.

ಮುಸ್ಲಿಮರ ಮಧ್ಯೆ ಭಿನ್ನಾಭಿಪ್ರಾಯವಿರುವ ವಿಷಯಗಳಲ್ಲಿ ನಮ್ಮ ನಿಲುವು ಇದಾಗಿದೆ. ಅಂದರೆ ಯಾವುದು ಉತ್ತಮವಾಗಿದೆಯೋ ಅದರ ಮೂಲಕ ಸತ್ಯವನ್ನು ಬಹಿರಂಗವಾಗಿ ಹೇಳುವುದು ಮತ್ತು ಸಂಶಯದ ಕಾರಣದಿಂದಾಗಿ –ಸ್ವೇಚ್ಛೆಯ ಕಾರಣದಿಂದಲ್ಲ– ಅದಕ್ಕೆ ವಿರುದ್ಧವಾಗಿ ಅಭಿಪ್ರಾಯಪಡುವವರನ್ನು ಪಥಭ್ರಷ್ಟರೆಂದು ಕರೆಯದಿರುವುದು. ಸುನ್ನತ್ತನ್ನು ಹಿಂಬಾಲಿಸಲು ಅಲ್ಲಾಹು ನನಗೆ ಹಿದಾಯತ್ ಕರುಣಿಸಿದಂದಿನಿಂದ, ಅಂದರೆ ಸುಮಾರು ಇಪ್ಪತ್ತು ವರ್ಷಗಳಿಂದ ನಾನು ಈ ನಿಲುವನ್ನು ಅವಲಂಬಿಸಿಕೊಂಡಿದ್ದೇನೆ.

ಇದು ನಮ್ಮ ನಿಲುವಾಗಿದೆ. ಬುದ್ಧಿಯಿರುವ ಒಬ್ಬ ವ್ಯಕ್ತಿ ಈ ವಿಷಯದಲ್ಲಿ ನಮ್ಮೊಂದಿಗೆ ತರ್ಕಿಸುವನೆಂದು ನಾನು ಭಾವಿಸುವುದಿಲ್ಲ. ಯಾರಾದರೂ ಇದಲ್ಲದ ಬೇರೇನಾದರೂ ನಮ್ಮ ಮೇಲೆ ಹೊರಿಸಿದರೆ ಅದು ಅಪರಾಧ, ಅತಿರೇಕ ಮತ್ತು ಅನ್ಯಾಯವಾಗಿದೆ. ಅದರ ಬಗ್ಗೆ ಅಲ್ಲಾಹು ಅವನನ್ನು ವಿಚಾರಣೆ ಮಾಡುವನು.”

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلى آلِهِ وَصَحْبِهِ أَجْمَعِين .

*********